

ಒಂದೇ ಮಾತಿನಲ್ಲಿ ಹೇಳುವುದಾದರೆ ಅಲ್ಲಿ ಕಾಣಸಿಗುತ್ತಿದ್ದುದು ಬರಿ ಹೊಯಿಗೆ ರಾಶಿ ಮತ್ತು ಅಡ್ಡಾದಿಡ್ಡಿ ಬಿದ್ದಿದ್ದ ಮರದ ದಿಮ್ಮಿಗಳು.

ಇದು ಕಳೆದ ಮಳೆಗಾಲದಲ್ಲಿ ಪ್ರಾಕೃತಿಕ ವಿಕೋಪಕ್ಕೆ ನಲುಗಿ ಹೋಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಚಾರ್ಮಾಡಿ ಗ್ರಾಮದ 'ಕೊಳಂಬೆ' ಎಂಬ ಊರಿನ ಕಥೆ.

'ಒಮ್ಮೆಲೇ ನೀರಿನ ಶಬ್ದ ಕೇಳಿತು. ಹೊರಬಂದಾಗ ನದಿಯಲ್ಲಿ ರಾಶಿರಾಶಿ ಮರದ ದಿಮ್ಮಿಗಳು ತೇಲಿ ಬರುತ್ತಿದ್ದುವು. ಮನೆಯ ಎದುರಿಗಿರುವ ತೆಂಗು ಕಂಗುಗಳು ನದಿ ಪಾಲಾದವು. ಇನ್ನೇನು ಮಾಡಬೇಕೆಂದು ತೋಚದೆ ತೊಟ್ಟಿಲಲ್ಲಿದ್ದ ಮಗುವನ್ನು ಕೈಗೆತ್ತಿಕೊಳ್ಳುತ್ತಿದ್ದಂತೆ ಮನೆಯ ಗೋಡೆಗೆ ನೀರು ಬಡಿಯತೊಡಗಿತು. ಹೊರಬರುತ್ತಿದ್ದಂತೆ ಮನೆಯ ಸುತ್ತ ನೀರು ಆವರಿಸಿತು. ಮಗುವನ್ನು ಎತ್ತಿಕೊಂಡು ಹೇಗೋ ಹೊರಗೆ ಓಡಿಬಂದೆ. ನೋಡನೋಡುತ್ತಿದ್ದಂತೆ ಹಟ್ಟಿಯಲ್ಲಿದ್ದ ದನಕರುಗಳು 'ಅಂಬಾ' ಎಂದು ಗೋಗರೆಯುತ್ತ ನೀರಿನಲ್ಲಿ ತೇಲಿಹೋದವು. ಮನೆಯಲ್ಲಿದ್ದ ಟೀವಿ, ಗೋದ್ರೆಜ್, ಮಂಚ, ಬೆಲೆಬಾಳುವ ವಸ್ತುಗಳು ಎಲ್ಲವೂ ನೀರಿನಲ್ಲಿ ಕೊಚ್ಚಿಕೊಂಡು ಹೋದುವು. ಕೆಲವೇ ಕ್ಷಣದಲ್ಲಿ ಆದಾಯದ ಮೂಲವಾಗಿದ್ದ ಎರಡು ಎಕರೆ ಅಡಿಕೆ ತೋಟ ನದಿಯಾಯಿತು. ಉಟ್ಟ ಬಟ್ಟೆ ಬಿಟ್ಟರೆ ನನ್ನಲ್ಲಿ ಬೇರೇನೂ ಇರಲಿಲ್ಲ' – ಇದು ಈ ಊರಿನ ಲೀಲಾವತಿ (ಹೆಸರು ಬದಲಾಯಿಸಲಾಗಿದೆ) ಒಬ್ಬರ ನೋವಲ್ಲ, ಹೆಚ್ಚಿನ ಮನೆಗಳ ಕಥೆ. ಈ ಘಟನೆಯನ್ನು ನೆನಪಿಸಿಕೊಂಡರೆ ಇಂದಿಗೂ ಇಲ್ಲಿನ ಜನ ಬೆಚ್ಚಿ ಬೀಳುತ್ತಾರೆ; ಕಣ್ಣೀರು ಸುರಿಸುತ್ತಾರೆ. ವರುಣರಾಯನಿಗೆ ಹಿಡಿಶಾಪ ಹಾಕುತ್ತಾರೆ.

ಕಳೆದ ವರ್ಷದ ನೆರೆಯಿಂದ ಹೀಗೆ ಸ್ಮಶಾನಸದೃಶಗೊಂಡಿದ್ದು ಇದೊಂದೇ ಊರಲ್ಲ. ಕರ್ನಾಟಕದ ಹಲವು ಕಡೆಗಳಲ್ಲಿ ಇಂಥ ದುರ್ಘಟನೆಗಳು ನಡೆದಿವೆ. ಆದರೆ ಈ ಊರಿನ ವಿಶೇಷತೆ ಇರುವುದು ಪ್ರವಾಹದ ನಂತರ ಇಲ್ಲಿ ಏನಾಯಿತು ಎಂಬುದರಲ್ಲಿ.

ಕರಾಳ ಘಟನೆ ನಡೆದ ನಂತರ ರಾಜ್ಯದ ಬೇರೆ ಬೇರೆ ಭಾಗಗಳ ಮಂದಿ ಇಲ್ಲಿಗೆ ಭೇಟಿ ನೀಡಿದರು. ವಿವಿಧ ಇಲಾಖೆಗಳ ಅಧಿಕಾರಿಗಳು ಬಂದರು. ಊರಿನಲ್ಲಿ ಬದುಕಿ ಉಳಿದಿದ್ದ ದನ, ಕರುಗಳಿಗೆ ಆಶ್ರಯದ ವ್ಯವಸ್ಥೆ ಮಾಡಿದರು. ಕಾಳಜಿ ಕೇಂದ್ರದಲ್ಲಿದ್ದ ಮಂದಿಗೆ ಮುಂದಿನ ಬದುಕಿಗೆ ಸೂಕ್ತ ವ್ಯವಸ್ಥೆಗೊಳಿಸುವ ಭರವಸೆ ನೀಡಿದರು. ಆದರೆ ಕೊಳಂಬೆಗೆ ಮರುಜೀವ ನೀಡುವುದು, ಕಹಿ ಘಟನೆಗಳನ್ನು ಮರೆಯಿಸಿ ಮತ್ತೆ ಊರಿನ ಮಂದಿಯನ್ನು ಅಲ್ಲಿಗೆ ಕರೆ ತರುವುದು ಸುಲಭದ ಮಾತಾಗಿರಲಿಲ್ಲ. ರಾಶಿಬಿದ್ದ ಹೊಯಿಗೆ ಮತ್ತು ಮರದ ದಿಮ್ಮಿಗಳನ್ನು ತೆಗೆಯುವುದೇ ಅಸಾಧ್ಯವಾಗಿತ್ತು. ನೆರೆಯ ವಿಷಯ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿದ್ದಂತೆ 'ಕೊಳಂಬೆ'ಯನ್ನು ನೋಡಲು ಬರುವವರ ಸಂಖ್ಯೆ ಹೆಚ್ಚಾಗತೊಡಗಿತು.

## ಮೋಹನ್-ರಾಜೇಶ್ ಸಾಥ್

ಬೆಳ್ತಂಗಡಿ ತಾಲೂಕಿನ ಉದ್ಯಮಿಗಳಾದ ಉಜಿರೆಯ 'ಲಕ್ಷ್ಮಿ ಇಂಡಸ್ಟ್ರೀಸ್'ನ ಮಾಲೀಕರಾದ ಕೆ. ಮೋಹನ್ ಕುಮಾರ್ ಮತ್ತು 'ಸಂಧ್ಯಾ ಟ್ರೇಡರ್ಸ್'ನ ಮಾಲೀಕ ರಾಜೇಶ್ ಪೈ ಕೂಡ ಹೀಗೆಯೇ ಊರಿನ ಪರಿಸ್ಥಿತಿ ನೋಡಿ ಅವರಿಗೆ ಕೈಲಾದಷ್ಟು ಸಹಾಯ ಮಾಡಿ ಹೋಗೋಣ ಎಂದೇ ಕೊಳಂಬೆಗೆ ಬಂದಿದ್ದು. ಬರುವಾಗ ಊರಿನವರಿಗೆ ನೀಡಲೆಂದು ಅಕ್ಕಿ ಮೂಟೆಯನ್ನು ತಂದರು. ಆದರೆ ಅವರಿಗೆ ಅದು ಊರಾಗಿ ಕಾಣಲಿಲ್ಲ; ಸ್ಮಶಾನವಾಗಿ ಕಂಡಿತು. ಆ ಸಂದರ್ಭದಲ್ಲಿ ಹಣ, ಇತರ ವಸ್ತುಗಳನ್ನು ನೀಡುವುದು ತಕ್ಷಣದ ಸಮಾಧಾನ ನೀಡಬಹುದೇ ಹೊರತು ಶಾಶ್ವತ ಪರಿಹಾರ ಆಗಲಾರದು ಎಂದು ಅವರಿಗನ್ನಿಸಿತು. ಹೀಗಾಗಿ ಹಾಳಾದ ಊರನ್ನು ಮರುರೂಪಿಸುವ ನಿರ್ಧಾರಕ್ಕೆ ಬಂದರು.

ಅವರ ನಿರ್ಧಾರದ ಫಲವಾಗಿ, ಅವರೊಂದಿಗೆ ನಿತ್ಯ ದುಡಿಯುತ್ತಿರುವ ಯುವಕರು, ಉಜಿರೆಯ ಆಸಕ್ತ ಯುವಕರನ್ನು ಒಟ್ಟುಗೂಡಿಸಿ 350 ಮಂದಿ ಸ್ವಯಂ ಸೇವಕರ ತಂಡ ಆಗಸ್ಟ್ 15 ರಂದು 'ಕೊಳಂಬೆ'ಗೆ ಕಾಲಿಟ್ಟಿತು. ಸ್ವಾತಂತ್ರ್ಯ ದಿನಾಚರಣೆಯ ದಿನವಾದ್ದರಿಂದ ಮೊದಲ ಕಾರ್ಯಕ್ರಮ ಎಂಬಂತೆ ಕೊಳಂಬೆಯಲ್ಲಿ ಧ್ವಜಾರೋಹಣಗೈದು, ಭಾರತ ಮಾತೆಗೆ ವಂದಿಸಿ ಅಲ್ಲಿನ ಮನೆಗಳ ಸ್ವಚ್ಛತೆಯಲ್ಲಿ ತೊಡಗಿದರು.

ಮೊದಲಿಗೆ ಇಪ್ಪತ್ತೈದು ಮನೆಗಳಿಗೆ ನೀರೊದಗಿಸುತ್ತಿದ್ದ ಹದಿನೆಂಟು ಬಾವಿಗಳಲ್ಲಿ ತುಂಬಿಕೊಂಡಿದ್ದ ಕೆಸರನ್ನು ತೆಗೆಯುವ ಮೂಲಕ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡರು. ನಂತರ ಎರಡೇ ದಿನದಲ್ಲಿ ಬಿದ್ದ ವಿದ್ಯುತ್ ಕಂಬಗಳು ಎದ್ದು ನಿಂತುವು. ಹಿಟಾಚಿ ಬಳಸಿ ಮನೆ ಸುತ್ತಲಿನ ಹೊಯಿಗೆ ತೆರವು ಕಾರ್ಯ ಭರದಿಂದ ಸಾಗಿತು. ಪಂಪ್ ಮೂಲಕ ನೀರು ಹಾಯಿಸಿ ಮನೆಯೊಳಗಿದ್ದ ಕೆಸರನ್ನು ತೆಗೆದರು. ಯುವಕರು ರಾಶಿಬಿದ್ದಿರುವ ಮರದ ದಿಮ್ಮಿಗಳ ತೆರವು ಕಾರ್ಯದಲ್ಲಿ ತೊಡಗಿದರು. ಹೊಯಿಗೆ, ಕಲ್ಲು ಹಾಕಿ ಉಜಿರೆ–ಚಾರ್ಮಾಡಿ ಮುಖ್ಯ ರಸ್ತೆಯಿಂದ (ಉಜಿರೆಯಿಂದ ಚಾರ್ಮಾಡಿ ರಸ್ತೆಯಲ್ಲಿ ಸಾಗಿದಾಗ 13 ಕಿ.ಮೀ. ದೂರದಲ್ಲಿ ಬೀಟಿಗೆ ಎಂಬ ಊರು ಸಿಗುತ್ತದೆ. ಅಲ್ಲಿ ಎಡಬದಿಗೆ ತೆರಳಿದರೆ 'ಕೊಳಂಬೆ' ಎಂಬ ಊರು ಸಿಗುತ್ತದೆ.) ಊರಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಸಿದ್ಧಗೊಳಿಸಿದರು.

## ನಾಳೆಯ ಚಿಂತೆ

ಇಷ್ಟಕ್ಕೂ ಮೋಹನ್ ಮತ್ತು ರಾಜೇಶ್ ಅವರ ಮನಸ್ಸು ತಣಿಯಲಿಲ್ಲ. 'ಇಷ್ಟು ಮಾಡಿಬಿಟ್ಟರೆ ಅದರಿಂದ ಏನೂ ಪ್ರಯೋಜನವಾಗಲಾರದು. ಊರಿಗೆ ಮರಳಲು ಹೆದರುವ ಮಂದಿಯನ್ನು ಮತ್ತೆ ಈ ಊರಿಗೆ ಕರೆತರಬೇಕಾದರೆ ನಾವು ಅವರ ಸಂಪರ್ಕದಲ್ಲಿರಬೇಕು, 'ಕೊಳಂಬೆ'ಯನ್ನು ಮತ್ತೆ ಹಿಂದಿನಂತೆ ಕಟ್ಟಬೇಕು' ಎಂಬ ಹಂಬಲ ಅವರನ್ನು ಮತ್ತಷ್ಟು ಕೆಲಸಕ್ಕೆ ಪ್ರಚೋದಿಸಿತು. 'ಇದಕ್ಕೆ ಬೇಕಾಗಿರುವುದು ಹಣ, ವಸ್ತುಗಳಲ್ಲ, ಬದಲಾಗಿ ಮಾನವ ಶ್ರಮ' ಎಂಬ ಅರಿವು ಅವರಿಗೆ



### ಮರುವೈಭವ ಪಡೆದ 'ಕೊಳಂಬೆ'

ಇದೀಗ ಕೊಳಂಬೆಗೆ ಕಾಲಿಟ್ಟವರಿಗೆ ಪ್ರಾಕೃತಿಕ ವಿಕೋಪದ ಚಿತ್ರಣ ಕಾಣಸಿಗಲಾರದು. ಗದ್ದೆ ನಾಟಿಗೆ ಊರು ಸಿದ್ಧಗೊಂಡಿದೆ. ಎಲ್ಲೆಡೆ ಹಸಿರು ಕಂಗೊಳಿಸುತ್ತಿದೆ. ಮತ್ತೆ ಊರ ಮಂದಿ ಹಿಂದಿನಂತೆ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಹೊಸ ಮನೆಗಳ ನಿರ್ಮಾಣದ ಕೆಲಸ ಆರಂಭಗೊಂಡಿದೆ. ರಸ್ತೆ ಕಾಂಕ್ರೀಟ್ ಭಾಗ್ಯ ಪಡೆದಿದೆ. ಸಂಜೆಯಾಗುತ್ತಿದ್ದಂತೆ ಬೀದಿದೀಪಗಳು ಜಗಮಗಿಸುತ್ತವೆ. ಮನೆಯೊಳಗೆ ನಂದಾದೀಪ ಉರಿಯುತ್ತಿದೆ. ಎಲ್ಲರೂ ಸಾಮರಸ್ಯದಿಂದ ಬದುಕುತ್ತಿದ್ದಾರೆ. ಅಡಿಕೆ ಗಿಡಗಳು ಫಸಲು ನೀಡುತ್ತಿವೆ. ಹೈನುಗಾರಿಕೆ ಆದಾಯ ನೀಡುತ್ತಿದೆ. ನೆಮ್ಮದಿಯ ಬದುಕನ್ನು ಮತ್ತೆ ಕಟ್ಟಿಕೊಂಡಿದ್ದಾರೆ. ಊರಿನಲ್ಲಿ ತರಕಾರಿ ಬೆಳೆದು ಪ್ರೇರಣೆ ಪಡೆದು ಈ ಊರಿನ ನಾಲ್ಕೈದು ಮಂದಿ ಸೇರಿ ದೂರದ 'ನಿಡಿಗಲ್' ಎಂಬಲ್ಲಿ ಎರಡು ಎಕರೆಯಲ್ಲಿ 1000 ಬಸಳೆ, ಅಲಸಂಡೆ, ಹರಿವೆ ಹೀಗೆ ಬಹುಬಗೆಯ ತರಕಾರಿ ಬೆಳೆದು ಆದಾಯ ಪಡೆಯುತ್ತಿದ್ದಾರೆ.